(ಇಂದು ದಿನಾಂಕ 05.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು :- ಪ್ರತಿವಾದಿ 3 ರಿಂದ 12, 15 ಮತ್ತು 17 ಪರ ಶ್ರೀ. ವಿ ಎಸ್ ಕೆ ವಕೀಲರಿಂದ:-**

ಈ ದಾವೆಯನ್ನು ಭಾಗಾಂಶಕ್ಕಾಗಿ ಹಾಕಿರುತ್ತಾರೆ. ಬೇರೆ ದಾಖಲಾತಿಗಳ ಬಗ್ಗೆ ಏನು ಪರಿಹಾರ ಕೋರಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಭಾಗಾಂಶಕ್ಕೆ ಈ ದಾವೆ ಹಾಕಿರುತ್ತಾರೆ ಎಂದು ವಾದಿಯ ಮೂಲಕ ನನಗೆ ಗೊತ್ತಾಗಿದೆ. ದಾವಾ ಆಸ್ತಿಗೆ ಅಂಟಿಕೊಂಡು ನನಗೆ ಸೇರಿದ ಆಸ್ತಿಗಳು ಇಲ್ಲ ಆದರೆ ಪಕ್ಕದಲ್ಲಿ ಇರುತ್ತವೆ. ನನಗೆ ತಿಳುವಳಿಕೆ ಬಂದ ಅಂದಿನಿಂದ ವಾದಿಯು ಇಟ್ಟಂಗೂರು ಗ್ರಾಮದಲ್ಲಿ ವಾಸವಿರುತ್ತಾರೆ. ವಾದಿಯು ಹಾಜರುಮಾಡಿದ ವಂಶವೃಕ್ಷದ ಬಗ್ಗೆ ನನಗೆ ಸ್ವಲ್ಪ ಮಾಹಿತಿ ಇದೆ. ಆ ವಂಶವೃಕ್ಷದಲ್ಲಿ ಯಾರ ಕುಟುಂಬದ ಬಗ್ಗೆ ನಿಮಗೆ ಗೊತ್ತಿದೆ ಎಂದರೆ ಸಾಕ್ಷಿಯು ಈರಮ್ಮನ ಕುಟುಂಬದ ಬಗ್ಗೆ ಗೊತ್ತಿದೆ ಎಂದು ಹೇಳುತ್ತಾರೆ. 1 ಮತ್ತು 2ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ಸ್ವಲ್ಪ ಗೊತ್ತಿದೆ. ಮುನಿಯಪ್ಪನಿಗೆ ತೊರಸಾಲಪ್ಪ ಎನ್ನುವ ಒಬ್ಬನೇ ಮಗ ಎಂದರೆ ಸಾಕ್ಷಿಯು ಅವರಿಗೆ ಹೆಣ್ಣು ಮಕ್ಕಳು ಇದ್ದಾರೆ ಎಂದು ಹೇಳುತ್ತಾರೆ. ತೊರಸಾಲಪ್ಪ ತೀರಿಕೊಂಡ ನಂತರ ಅವರ ಹೆಂಡತಿ ಕಲ್ಲಮ್ಮ ಮತ್ತು ಕಲ್ಲಮ್ಮನ ಮಾವ ಮುನಿಯಪ್ಪ ಎಷ್ಟು ವರ್ಷಗಳ ಕಾಲ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ತಿಳುವಳಿಕೆ ಬಂದಾಗ ಕಲ್ಲಮ್ಮ ಒಟ್ಟು ಕುಟುಂಬದಲ್ಲಿ ಇದ್ದರು. ಅವರು ಬೊಮ್ಮಸಂದ್ರದ ಮನೆಯಲ್ಲಿ ವಾಸವಿದ್ದರು. ಚೆನ್ನಮ್ಮ, ಸಂಪಮ್ಮ ಮತ್ತು ಈರಮ್ಮ ಮದುವೆ ಆದ ನಂತರ ಅವರ ಗಂಡಂದಿರ ಮನೆಗಳಲ್ಲಿ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ. 1974 ರಲ್ಲಿ ಕಲ್ಲಮ್ಮ ಮತ್ತು ಮುನಿಯಪ್ಪ ಪ್ರತ್ಯೇಕವಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಕಲ್ಲಮ್ಮ ಮತ್ತು ಮುನಿಯಪ್ಪರವರನ್ನು ನಾನು ನೋಡಿರುವುದಿಲ್ಲ. ಅವರು ಒಟ್ಟು ಕುಟುಂಬದಲ್ಲಿ ಇದ್ದ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

2. ಮುನಿಯಪ್ಪನ ಕುಟುಂಬದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಆದ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ. 174/2 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ವಾದಿಯು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುವುದನ್ನು ನೋಡಿ ವಾದಿಯು ದಾವಾ ಆಸ್ತಿಗೆ ಸಂಬಂಧಪಟ್ಟವರು ಎಂದು ನನಗೆ ಗೊತ್ತಾದ ಮೇರೆಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ. ದಾವಾ ಆಸ್ತಿ ಸರ್ವೆ ನಂ. 174/2 ಮತ್ತು ಅದರ ಸುತ್ತಮುತ್ತಲಿನ ಆಸ್ತಿಗಳು ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಗೆ ಬಂದು ಅಲ್ಲಿ ಹಲವಾರು ವರ್ಷಗಳಿಂದ ಕಟ್ಟಡಗಳನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇವಾಗ 4-5 ವರ್ಷಗಳಿಂದ ಕಟ್ಟಡಗಳನ್ನು ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ಖರೀದಿದಾರರು ಅಂದರೆ

ಪ್ರತಿವಾದಿ 3 ರಿಂದ 17 ರವರು ದಾವಾ ಆಸ್ತಿ ಐಟಂ ನಂ. 1 ರಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಕೆಲವರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಐಟಂ ನಂ. 1 ರಲ್ಲಿ ಕಟ್ಟಿರುವ ಮನೆಗಳ ಛಾಯಾಚಿತ್ರಗಳನ್ನು ತೋರಿಸಿ ಸಾಕ್ಷಿಯು ಅದನ್ನು ಒಪ್ಪಿ **ನಿಡಿ 1 ರಿಂದ 5** ಎಂದು ಗುರುತಿಸಲಾಯಿತು. ಖರೀದಿದಾರರು ಕಟ್ಟಿದ ಮನೆಗಳಲ್ಲಿ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಗೊತ್ತಿಲ್ಲ. ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವಾಗ ನಾನು ಮತ್ತು ಸಂಪಮ್ಮನ ಮಗ ಹರೀಶ್ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದೆನು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ ಸಂಬಂಧಿಕರಾದ ಕೃಷ್ಣಪ್ಪ ಮತ್ತು ನಮ್ಮ ಮಧ್ಯೆ ಸರ್ವೆ ನಂ. 172/4 ಮತ್ತು 173/3 ಕ್ಕೆ ಸಂಬಂಧಿಸಿದಂತೆ ತಕರಾರು ಇರುತ್ತದೆ ಎಂದರೆ ಸರಿ. ಸರ್ವೆ ಮಾಡಲು ಸರ್ವೆ ಅಧಿಕಾರಿಗಳು ಬಂದಾಗ ನಾನು ಗಲಾಟೆ ಮಾಡಿರುವ ಕಾರಣ ಕೃಷ್ಣಪ್ಪರವರು ಪೋಲೀಸ್ ಸಹಾಯದಿಂದ ಸರ್ವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಕೃಷ್ಣಪ್ಪರವರು 172/4 ಮತ್ತು 173/3 ನ್ನು 3ನೇ ಪ್ರತಿವಾದಿಯ ಕುಟುಂಬದವರಿಂದ ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 3ನೇ ಪ್ರತಿವಾದಿಯ ಮೇಲೆ ನನಗೆ ವೈಷಮ್ಯ ಇರುವ ಕಾರಣ ನಾನು ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 174/2 ಪೋಡಿಯಾಗಿ ಹೊಸ ನಂಬರ್ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಐಟಂ ನಂ. 1 ಆಸ್ತಿಯು 1974 ರ ಹಕ್ಕು ಬಿಡುಗಡೆ ಪತ್ರದ ಮೂಲಕ ಕಲ್ಲಮ್ಮನಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ದಾಖಲೆಗಳ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕಲ್ಲಮ್ಮ ಮಾರಾಟ ಮಾಡುವ ತನಕ ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ . ಆದರೆ ಯಾವಾಗ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಈರಮ್ಮನ ಹೆಸರಿನಲ್ಲಿ ದಾಖಲಾತಿಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಈರಮ್ಮ ಮತ್ತು ಅವರ ಕುಟುಂಬದ 4 ಜನ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ. ನಾನು ಹೇಳುವ ರೀತಿ ಯಾವುದೇ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಖರೀದಿದಾರರಿಗೆ ತೊಂದರೆ ಕೊಡಲು ವಾದಿಯ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಈರಮ್ಮನ ಕುಟುಂಬಕ್ಕೆ ಬೇರೆ ಆಸ್ತಿಗಳು ಇದೆ ಎಂದರೆ ಗೊತ್ತಿಲ್ಲ.

**ವಾಟೀಸವಾಲು :- ಪ್ರತಿವಾದಿ 13 ಮತ್ತು 14 ಪರ ಶ್ರೀ ಸಿ ಎ ಎಸ್ ವಕೀಲರಿಂದ :-**

ಈರಮ್ಮ ಮತ್ತು ಅವರ ಅಕ್ಕತಂಗಿಯರಿಗೆ ನಾನು ಹುಟ್ಟುವುದಕ್ಕಿಂತ ಮೊದಲೇ ಮದುವೆ ಆಗಿರುವುದರಿಂದ ನಾನು ಅವರನ್ನು ಬೊಮ್ಮಸಂದ್ರ ಗ್ರಾಮದಲ್ಲಿ ನೋಡಿರುವುದಿಲ್ಲ ಎಂದರೆ ಸರಿ. ನಿಪಿ 55 ರಲ್ಲಿ ತೋರಿಸಿದ ಆಸ್ತಿಯು ನನ್ನ ಹೆಸರಿನಲ್ಲಿ ಇರುವುದಿಲ್ಲ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತೇವೆ. ಅದರಲ್ಲಿ ಮೊದಲು ವ್ಯವಸಾಯ ಮಾಡುತ್ತಿದ್ದೆವು , ಇವಾಗ ಮಾಡುವುದಿಲ್ಲ. ನನ್ನ ಆಸ್ತಿಯ ಪೂರ್ವದ ಕಡೆ ಇರುವ ಕೃಷ್ಣಪ್ಪ , ಸಂಪಮ್ಮ , ಮತ್ತು ಶಿವರಾಜ್ ರೆಡ್ಡಿ ರವರ ಜಮೀನುಗಳನ್ನು ದಾಟಿಕೊಂಡು ದಾವಾ ಆಸ್ತಿ ಐಟಂ ನಂ. 1ಕ್ಕೆ ಹೋಗಬೇಕಾಗುತ್ತದೆ ಎಂದರೆ ಸರಿ. ಸರ್ವೆ ನಂ. 174/2 ರಲ್ಲಿ ಮನೆಗಳಾಗಿರುತ್ತದೆ, ವ್ಯವಸಾಯ ಇರುವುದಿಲ್ಲ, ನನಗೆ ಆ ಕಡೆ ಹೋಗುವ ಅವಶ್ಯಕತೆ ಇರುವುದಿಲ್ಲ. ನಾನು ಮತ್ತು ಸಂಪಮ್ಮನ ಮಗ ಹರೀಶ್ ಗೆಳೆಯರು ಎಂದರೆ ಸರಿಯಲ್ಲ. ಸಂಪಮ್ಮನ ಮಗ ಹರೀಶ್ ರವರಿಗೆ ಸರ್ವೆ ನಂ. 174/2 ರಲ್ಲಿ ರಸ್ತೆ ಮಾಡಬೇಕು ಎನ್ನುವ ಉದ್ದೇಶದಿಂದ ಪ್ರತಿವಾದಿಗಳಿಗೆ ತೊಂದರೆ ಕೊಡಲು ವಾದಿಯ ಕಡೆಯಿಂದ ಈ ದಾವೆ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಸಂಪಮ್ಮ ಮತ್ತು ಹರೀಶ್ ರವರಿಗೆ ಸೇರಿದ ಆಸ್ತಿ ಸರ್ವೆ ನಂ. 174/1 ಎಂದರೆ ಸರಿ. ಕೃಷ್ಣಪ್ಪರವರು ಸರ್ವೆ ಮಾಡಿಸುವಾಗ ಹರೀಶ್ ರವರಿಗೆ ರಸ್ತೆ ಸಿಗುವುದಿಲ್ಲ ಎನ್ನುವ ಉದ್ದೇಶದಿಂದ ನಾನು ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆಸ್ತಿಗೆ ಸಂಬಂಧಿಸಿದಂತೆ ಸರ್ವೆ ಸರಿಯಾಗಿ ಆಗಿರುವುದಿಲ್ಲ ಎಂದು ನಾನು ಹೇಳಿದ್ದೆನು. ವಾದಿಯು ದಾವಾ ಆಸ್ತಿಗೆ ಇವಾಗ ಬರುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.